**ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಶಹಾಬಾದ**

**ಸಿ.ಸಿ. ನಂ: 222/2010**

**ಸರಕಾರದ ಪರವಾಗಿ : ಶಹಾಬಾದ ಪಿ.ಎಸ್**

//ವಿರುದ್ಧ//

**ಆರೋಪಿತರು:-** 1. ನಾಗಪ್ಪಾ ತಂದೆ: ಗುರುಲಿಂಗಪ್ಪಾ ಮಸಗಲ,
ವ: 40 ವರ್ಷ , ಉ: ಒಕ್ಕಲುತನ,
ಸಾ: ಮರತೂರ.

2. ಜಗನಾಥ ತಂದೆ: ಶಿವಶರಣಪ್ಪಾ ಅಂಬಲಗಿ,
ವ: 48 ವರ್ಷ, ಉ: ಗ್ರಾಮ ಲೆಕ್ಕಿಗ,
ಸಾ: ಕಲಬುರಗಿ.

3. ಶಿವಶರಣಪ್ಪಾ ತಂದೆ: ಶಿಪ್ಪಣ್ಣಾ ಜಾಕನಳ್ಳಿ,
ವ: 59 ವರ್ಷ, ಉ: ಕಂದಾಯ ನಿರೀಕ್ಷಕರು,
ಸಾ: ಕಲಬುರಗಿ.

**<u>ದಂಡ ಪ್ರಕ್ರಿಯಾ ಸಂಹಿತೆ ಕಲಂ 313 ರ ಅನ್ವಯ ಆರೋಪಿತರ ಹೇಳಿಕೆ</u>**

ಪ್ರಶ್ನೆ 1) ಅಭಿಯೋಜನೆ ಪರ ವಿಚಾರಣೆ ಮಾಡಿದ ಸಾಕ್ಷಿಗಳನ್ನು ಮನಪೂರ್ವಕವಾಗಿ ಕೇಳಿದ್ದಿರಾ ?

ಉ: ಹೌದು

ಪ್ರಶ್ನೆ2) ಫ್ರಾಸಾ.1 ಶಿವಶಂಕರ, ಇವರು ತಮ್ಮ ಸಾಕ್ಷ್ಯದಲ್ಲಿ ಹೇಳುತ್ತಾರೆ, ತನ್ನ ತಂದೆ ಗುರುಲಿಂಗಪ್ಪನಿಗೆ ತಾನು ಶಿವಶಂಕರ, 1 ನೇ ಆರೋಪಿಯಾದ ನಾಗಪ್ಪ ಮತ್ತು ಚಾಸಾ-4 ಮಲ್ಲಿನಾಥ ಮೂರು ಜನ ಗಂಡು ಮಕ್ಕಳು ಇದ್ದೇವೆ, ತನ್ನ ತಂದೆ ಜೀವಂತ ಇರುವಾಗಲೇ ತಾನು ಮತ್ತು ತನ್ನ ಸಹೋದರರು ಬೇರೆ ಬೇರೆಯಾಗಿದ್ದೇವೆ, ತಾವು ಹಿಸ್ಸೆಯಾಗುವ ಕಾಲಕ್ಕೆ ಮರತೂರು ಗ್ರಾಮದ ಸರ್ವೆ ನಂಬರ 449 ರಲ್ಲಿ 5 ಎಕರೆ 37 ಗುಂಟೆ ಮಡ್ಡಿ ಜಮೀನನ್ನು ತನ್ನ ತಂದೆ ತಮಗೆ ಸಮಾನವಾಗಿ ಹಂಚಿ ಕೊಟ್ಟಿದ್ದರು, ಆದರೆ ಆನಂತರ 1 ನೇ ಆರೋಪಿ ತನ್ನ ಅಣ್ಣ ನಾಗಪ್ಪ 2 ಮತ್ತು 3 ನೇ ಆರೋಪಿತರೊಂದಿಗೆ ಮಿಲಾತಿಯಾಗಿ ತನ್ನ ತಂದೆ ಜೀವಂತವಿರುವಾಗಲೇ ಆತ ಮೃತಪಟ್ಟಿದ್ದಾನೆ ಅಂತ ಸುಳ್ಳು ಮರಣ ಪ್ರಮಾಣ ಪತ್ರ ತಯಾರಿಸಿ ತನ್ನ ಅಣ್ಣ ನಾಗಪ್ಪ ತನ್ನ ಹೆಸರಿಗೆ ಸದರಿ ಜಮೀನು ಸರ್ವೆ ನಂಬರ 449 ನೇದ್ದನ್ನು ಖಾತೆ ಬದಲಾವಣೆ ಮಾಡಿಸಿಕೊಂಡಿರುತ್ತಾರೆ, ಅಂತಾ ಸಾಕ್ಷ್ಯ ನುಡಿಯುತ್ತಾರೆ. ಅದಕ್ಕೆ ನೀವೇನು ಹೇಳುತ್ತೀರಿ ?

ಉ: ಸುಳ್ಳು

Scanned with OKEN Scanner

ಪ್ರಶ್ನೆ3) ಪ್ರಾಸಾ.1 ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಹೇಳುತ್ತಾರೆ, ತನ್ನ ತಂದೆ ಜೀವಂತವಿರುವಾಗ ಆತ ದಿನಾಂಕಃ 11/04/2005 ರಂದು ಮೃತಪಟ್ಟಿದ್ದಾನೆ ಎಂದು ದಿನಾಂಕಃ 13/09/2005 ರಂದು 2 ಮತ್ತು 3 ನೇ ಆರೋಪಿತರು ಆತನ ಮರಣ ಪ್ರಮಾಣ ಪತ್ರವನ್ನು 1 ನೇ ಆರೋಪಿಗೆ ನೀಡಿರುತ್ತಾರೆ, 1 ನೇ ಆರೋಪಿ ಜಮೀನನ್ನು ತನ್ನ ಹೆಸರಿಗೆ ಸುಳ್ಳು ಮರಣ ಪ್ರಮಾಣ ಪತ್ರದ ಆದಾರದ ಮೇಲೆ ಹಂಕೊಂಡಿದ್ದರ ಬಗ್ಗೆ ತಾನು ತಹಶೀಲ್ದಾರ ಕಚೇರಿಗೆ ಹೋಗಿ ವಿಚಾರಿಸಿದಾಗ ತಮ್ಮದು ತಪ್ಪಾಗಿದೆ ತನಗೆ ಸದರಿ ಆದೇಶ ರದ್ದು ಮಾಡಲು ಅಧಿಕಾರ ಇರುವುದಿಲ್ಲ, ಸಹಅಯಕ ಆಯುಕ್ತರು ಸೇಡಂ ರವರಿಗೆ ಮೇಲ್ಮನವಿ ಸಲ್ಲಿಸುವಂತೆ ತನಗೆ ಹೇಳಿರುತ್ತಾರೆ, ಆನಂತರ ತಾನು ಸಹಾಯಕ ಆಯುಕ್ತರು ಸೇಡಂ ರವರಿಗೆ ಮೇಲ್ಮನವಿ ಸಲ್ಲಿದ್ದು, ದಿನಾಂಕಃ 17/07/2009 ರಂದು 1 ನೇ ಆರೋಪಿಯ ಹೆಸರಿಗೆ ಜಮೀನು ಖಾತೆಯಾಗಿದ್ದನ್ನು ರದ್ದುಪಡಿಸಿದ್ದು, ಈಗ ಸದರಿ ಆಸ್ತಿ ತನ್ನ ತಂದೆಯ ಹೆಸರಿನಲ್ಲಿ ಇದ್ದಿದ್ದು, ಆನಂತರ ತನ್ನ ತಂದೆ ದಿನಾಂಕಃ 08/09/2006 ರಂದು ಮೃತಪಟ್ಟಿದ್ದು, ತನ್ನ ತಂದೆ ಮೃತಪಟ್ಟ ಬಗ್ಗೆ ಗ್ರಾಮ ಲೆಕ್ಕಾಧಿಕಾರಿಗಳು ಮರತೂರು ರವರಿಗೆ ತನ್ನ ತಂದೆಯವರ ಮರಣ ಪ್ರಮಾಣ ಪತ್ರ ನೀಡುವಂತೆ ಕೇಳಿದಾಗ ಅವರು ಈಗಾಗಲೇ ನಿನ್ನ ತಂದೆಯ ಮರಣ ಪ್ರಮಾಣ ಪತ್ರ ನಿಮ್ಮ ಅಣ್ಣ 1 ನೇ ಆರೋಪಿ ಪಡೆದುಕೊಂಡು ಹೋಗಿರುತ್ತಾರೆ, ತಾವು ಕೊಡುವುದಿಲ್ಲ ಅಂತ ಹೇಳಿದರು, ಅಂತಾ ಸಾಕ್ಷ್ಯ ನುಡಿಯುತ್ತಾರೆ. ಅದಕ್ಕೆ ನೀವೇನು ಹೇಳುತ್ತೀರಿ ?

ಉಃ ಸುಳ್ಳು

ಪ್ರಶ್ನೆ4) ಪ್ರಾಸಾ.1 ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಹೇಳುತ್ತಾರೆ, ಆನಂತರ ತಾನು ತಹಶೀಲ್ದಾರ ಕಚೇರಿಗೆ ಹೋಗಿ ವಿಚಾರಿಸಿದಾಗ ಅವರು ತನ್ನ ತಂದೆ ಮರಣ ದಿನಾಂಕವನ್ನು ತಮ್ಮ ಕಚೇರಿಯಲ್ಲಿ ದಾಖಲೆಗಳಲ್ಲಿ ಎಂಟ್ರಿಯಾಗಿರುವುದಿಲ್ಲ, ಆದ್ದರಿಂದ ನೀವು ಕೋರ್ಟಿಗೆ ಹೋಗಿ ಆದೇಶದ ಪಡೆದು ನಿನ್ನ ತಂದೆಯ ಮರಣ ಪ್ರಮಾಣ ಪತ್ರ ಪಡೆಯಬೇಕು ಅಂತ ತಿಳಿಸಿರುತ್ತಾರೆ, ಆನಂತರ ತಾನು ನ್ಯಾಯಾಲಯಕ್ಕೆ ಬಂದು ತನ್ನ ತಂದೆಯ ಮರಣ ದಿನಾಂಕದ ಬಗ್ಗೆ ವಕೀಲರ ಮುಖಾಂತರ ಅರ್ಜಿ ಸಲ್ಲಿಸಿ ಆದೇಶ ಪಡೆದು ತಹಾಶೀಲ್ದಾರ ಕಚೇರಿಗೆ ಹೋಗಿ ಅದನ್ನು ಹಾಜರುಪಡಿಸಿದ್ದು, ಆನಂತರ ತಹಾಶೀಲ್ದಾರ ಕಚೇರಿಯಲ್ಲಿ ತನಗೆ ತನ್ನ ತಂದೆಯ ಮರಣ ಪ್ರಮಾಣ ಪತ್ರವನ್ನು ಅವರು ಮರಣ ಹೊಂದಿದ ದಿನಾಂಕಃ 08/9/2006 ಅಂತ ನಮೂದಿಸಿ ನೀಡಿರುತ್ತಾರೆ, ಅಂತಾ ಸಾಕ್ಷ್ಯ ನುಡಿಯುತ್ತಾರೆ. ಅದಕ್ಕೆ ನೀವೇನು ಹೇಳುತ್ತೀರಿ ?

ಉಃ ಸುಳ್ಳು

ಪ್ರಶ್ನೆ 5) ಪ್ರಾಸಾ.1 ಮುಂದುವರೆದು, ತಮ್ಮ ಸಾಕ್ಷ್ಯದಲ್ಲಿ ಹೇಳುತ್ತಾರೆ, ಇದು ಅಲ್ಲದೆ 2 ನೇ ಆರೋಪಿ ಗ್ರಾಮ ಲೆಕ್ಕಾಧಿಕಾರಿ ತನ್ನ ತಂದೆ ಮೃತಪಟ್ಟಿರುತ್ತಾರೆ ಅಂತ ಹೇಳಿ ಮತ್ತು ತನ್ನ ತಂದೆ ಕೇವಲ 1 ನೇ ಆರೋಪಿ ನಾಗಪ್ಪ ಮಾತ್ರ ಮಗ ಇದ್ದಾನೆ ಅಂತ ತಪ್ಪು ವಂಶಾವಳಿ ಕೊಟ್ಟಿರುತ್ತಾರೆ, ನಂತರ ಜಮೀನಿನ ಖಾತೆ ಬದಲಾವಣೆ ಕಾಲಕ್ಕೆ ಮ್ಯುಟೇಶನ್ ಅರ್ಜಿಗಳನ್ನು ಆರೋಪಿತರು ಸಾಕ್ಷಿದಾರರಾದ ಖಂಡೇರಾವ ಪವಾರ ರವರ ಸಹಿಯನ್ನು ಖೊಟ್ಟಿಯಾಗಿ ಮಾಡಿರುತ್ತಾರೆ, ಆರೋಪಿತರು ತನಗೆ ಊರಲ್ಲಿ ಯಾವುದೇ ರೀತಿಯ ಜಮೀನನ್ನು ಬರದೇ ಹಾಗೆ ಮಾಡಿದ್ದಾರೆ, ಅಂತಾ ಸಾಕ್ಷ್ಯ ನುಡಿಯುತ್ತಾರೆ. ಅದಕ್ಕೆ ನೀವೇನು ಹೇಳುತ್ತೀರಿ ?

ಉ: ಸುಳ್ಳು

ಪ್ರಶ್ನೆ 6) ನೀವು ಇನ್ನೇನಾದರು ಹೆಚ್ಚಿಗೆ ಹೇಳುವುದು ಇದೆಯೇ ?

ಉ: ಇಲ್ಲ ಏನು ಇಲ್ಲ

ಪ್ರಶ್ನೆ 7) ನಿಮ್ಮ ಪರವಾಗಿ ಯಾವುದಾದರೂ ಸಾಕ್ಷಿಗಳನ್ನು ಮಾಡಿಸುತ್ತೀಯಾ?

ಉ: ಇಲ್ಲ

(ಆರೋಪಿಗೆ ನನ್ನ ಸಮಕ್ಷಮ ಅವರಿಗೆ ಗೊತ್ತಿದ್ದ ಭಾಷೆಯಲ್ಲಿ ಅಭಿಯೋಜಕರ ಪರ ವಿಚಾರಣೆಯಾದ ಸಾಕ್ಷಿಗಳ ಹೇಳಿಕೆಗಳನ್ನು ಓದಿ ಹೇಳಲಾಯಿತು).

28/8

ದಿನಾಂಕ 28.08.2019

ಪ್ರ.ದ. ನ್ಯಾ.ದಂ. ಶಹಾಬಾದ

# ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಶಹಾಬಾದ

**ಸಿ.ಸಿ. ನಂ: 222/2010**

**ಸರಕಾರದ ಪರವಾಗಿ : ಶಹಾಬಾದ ಪಿ.ಎಸ್**

//ವಿರುದ್ಧ//

**ಆರೋಪಿತರು:-**

1. ನಾಗಪ್ಪಾ ತಂದೆ: ಗುರುಲಿಂಗಪ್ಪಾ ಮಸಗಲ,
ವ: 40 ವರ್ಷ , ಉ: ಒಕ್ಕಲುತನ,
ಸಾ: ಮರತೂರ.

2. ಜಗನಾಥ ತಂದೆ: ಶಿವಶರಣಪ್ಪಾ ಅಂಬಲಗಿ (ಮೃತ)
ವ: 48 ವರ್ಷ, ಉ: ಗ್ರಾಮ ಲೆಕ್ಕಿಗ,
ಸಾ: ಕಲಬುರಗಿ.

3. ಶಿವಶರಣಪ್ಪಾ ತಂದೆ: ಶಿಪ್ಪಣ್ಣಾ ಜಾಕನಳ್ಳಿ,
ವ: 59 ವರ್ಷ, ಉ: ಕಂದಾಯ ನಿರೀಕ್ಷಕರು,
ಸಾ: ಕಲಬುರಗಿ.

**ಮುಂದುವರೆದ ದಂಡ ಪ್ರಕ್ರಿಯಾ ಸಂಹಿತೆ ಕಲಂ 313 ರ ಅನ್ವಯ ಆರೋಪಿತರ ಹೇಳಿಕೆ**

ಪ್ರಶ್ನೆ 1) ಅಭಿಯೋಜನೆ ಪರ ವಿಚಾರಣೆ ಮಾಡಿದ ಸಾಕ್ಷಿಗಳನ್ನು ಮನಪೂರ್ವಕವಾಗಿ ಕೇಳಿದ್ದಿರಾ ?

ಉ: ಹೌದು

ಪ್ರಶ್ನೆ2) ಪ್ರಾಸಾ.10 ರೇವಣಸಿದ್ದಪ್ಪ ತಂದೆ: ಚಂದ್ರಶಾ ಇವರು ತಮ್ಮ ಸಾಕ್ಷ್ಯದಲ್ಲಿ ಹೇಳುತ್ತಾರೆ, ಚಾಸಾ-1 ಮತ್ತು 4 ಇವರ ಪರಿಚಯ ಇದೆ, ಚಾಸಾ-5, 7, 8 ಇವರ ಪರಿಚಯ ಕೂಡ ಇದೆ. ನ್ಯಾಯಾಲಯದ ಮುಂದೆ ಇರುವ ಆರೋಪಿಗಳ ಪರಿಚಯ ಕೂಡ ಇದೆ. ಗುರುಲಿಂಗಪ್ಪ ಇವರಿಗೆ ಒಟ್ಟು ಮೂರು ಜನ ಮಕ್ಕಳು, ಒಬ್ಬ ಮಗ ಮಲ್ಲಿನಾಥನು ಸರ್ಕಾರಿ ಇಂಜಿನಿಯರ್ ಆಗಿದ್ದಾನೆ, ಇನ್ನಿಬ್ಬರು ಊರಲ್ಲಿ ಇದ್ದು ಒಕ್ಕಲುತನ ಮಾಡುತ್ತಾರೆ, ಗುರುಲಿಂಗಪ್ಪನ ಇನ್ನೊಬ್ಬ ಮತ ಶಿವಶಂಕರ ಇತನು ಫಿರ್ಯಾದಿದಾರ ಇರುತ್ತಾನೆ, ನಾರಾಯಣ ಇತನು ಆರೋಪಿ ಇರುತ್ತಾನೆ, ಮೃತ ಗುರುಲಿಂಗಪ್ಪನ ಹೆಸರಿನಲ್ಲಿ 5 ಎಕರೆ 37 ಗುಂಟೆ ಜಮೀನು ಇತ್ತು ಅದರ ಸರ್ವೆ ನಂಬರ 449 ಇದ್ದು ಮರತೂರು ಗ್ರಾಮದಲ್ಲಿ ಇದೆ, ಅಂತಾ ಸಾಕ್ಷ್ಯ ನುಡಿಯುತ್ತಾರೆ. ಅದಕ್ಕೆ ನೀವೇನು ಹೇಳುತ್ತೀರಿ ?

ಉಃ

ಪ್ರಶ್ನೆ 3) ಪ್ರಾಸಾ.10 ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಹೇಳುತ್ತಾರೆ, ಜಮೀನು ಮೃತ ಗುರುಲಿಂಗಪ್ಪನ ಹೆಸರಿನಲ್ಲಿ ಇತ್ತು, 2005 ನೇ ಸಾಲಿನಲ್ಲಿ ಆರೋಪಿ ನಾಗಣ್ಣ ಇತನು ತನ್ನ ತಂದೆ ಗುರುಲಿಂಗಪ್ಪ ಬದುಕಿರುವಾಗಲೇ ಸತ್ತಿರುತ್ತಾನೆ ಎಂದು ತಾಲೂಕ ದಂಡಾಧಿಕಾರಿಗಳ ಕಾರ್ಯಾಲಯ ಚಿತ್ತಾಪುರದಿಂದ ಸುಳ್ಳು ಮರಣ ಪ್ರಮಾಣ ಪತ್ರವನ್ನು ಪಡೆದುಕೊಂಡು, ಸಂಪೂರ್ಣ ಜಮೀನನ್ನು ತನ್ನ ಹೆಸರಿಗೆ ಕಾನೂನು ಬಾಹಿರವಾಗಿ ವರ್ಗಾವಣೆ ಮಾಡಿಕೊಂಡಿರುತ್ತಾನೆ. ಒಬ್ಬ ಜಗನ್ನಾಥ ಎಂಬ ಗ್ರಾಮ ಲೆಕ್ಕಾಧಿಕಾರಗಳು ಕೂಡ ಇದರಲ್ಲಿ ಶಾಮೀಲಾಗಿದ್ದಾರೆ ಎಂದು ನನಗೆ ಗೊತ್ತಾಯಿತು, ಮುಂದೆ ಜಮೀನು ಮಾರಾಟ ಮಾಡುಬೇಕು ಎಂಬ ಸಂದರ್ಬದಲ್ಲಿ ಚಾಸಾ-1 ಇವರಿಗೆ ಆರೋಪಿ ನಾಗಣ್ಣ ಇತನು ಕಾನೂನು ಬಾಹಿರವಾಗಿ ಜಮೀನನ್ನು ತನ್ನ ಹೆಸರಿಗೆ ವರ್ಗಾವಣೆ ಮಾಡಿಕೊಂಡ ವಿಷಯ ಗೊತ್ತಾಗಿದೆ, ಈ ಬಗ್ಗೆ ಚಾಸಾ-1 ರವರು ಆರೋಪಿ ನಾಗಣ್ಣ ಇತನನ್ನು ಕೇಳಲು ಹೋದಾಗ ಅವರಿಬ್ಬರ ನಡುವೆ ಜಗಳ ಆಯಿತು ಬಿಡಿಸಲು ಹೋದ ನನಗೂ ಕೂಡ ಆರೋಪಿ ನಾಗಣ್ಣ ಇತನು ಚಪ್ಪಲಿ ತೆಗೆದುಕೊಂಡು ಹೊಡೆದಿದ್ದಾನೆ ಆ ಬಗ್ಗೆ ಇನ್ನೊಂದು ಪ್ರಕರಣ ಇದೇ ನ್ಯಾಯಾಲಯದಲ್ಲಿ ವಿಚಾರಣೆಯಾಗಿ ಮುಗಿದಿದೆ, ಈ ಬಗ್ಗೆ ಪೋಲೀಸರಿಗೆ ಹೇಳಿಕೆಯನ್ನು ಕೊಟ್ಟಿದ್ದೇನೆ, ಅಂತಾ ಸಾಕ್ಷ್ಯ ನುಡಿಯುತ್ತಾರೆ. ಅದಕ್ಕೆ ನೀವೇನು ಹೇಳುತ್ತೀರಿ ?

ಉಃ

ಪ್ರಶ್ನೆ 4) ಪ್ರಾಸಾ.12 ಶಂಕ್ರಣ್ಣ ತಂದೆಃ ಲಿಂಗಣ್ಣ ವನಕಿಹಾಳ ಇವರು ತಮ್ಮ ಸಾಕ್ಷ್ಯದಲ್ಲಿ ಹೇಳುತ್ತಾರೆ, ಈ ಪ್ರಕರಣದಲ್ಲಿ ದಿನಾಂಕ: 08-09-2006 ರಂದು ತೀರಿಕೊಂಡಿರುವ ಶ್ರೀ ಗುರುಲಿಂಗಪ್ಪ ತಂದೆ ನಾಗಪ್ಪ, ಸಾಃ ಮರತೂರ ಇವರು ತೀರಿಕೊಂಡಿರುವ ಬಗ್ಗೆ ದಿಃ02-03-2009 ರಂದು ಆಗಿನ ಸದರಿ ಗ್ರಾಮದ ಗ್ರಾಮಲೆಕ್ಕಾಧಿಕಾರಿಯಾಗಿದ್ದ ಶ್ರೀ ವಸಂತರಾಜ ಮೂರ್ತಿ ಚಾಸಾ-8 ರವರು ಕೊಟ್ಟ ವರದಿಯ ಆಧಾರದ ಮೇಲೆ ದಿಃ 10-08-2010 ರಂದು ಸದರಿ ವ್ಯಕ್ತಿಯ ಮರಣ ಪ್ರಮಾಣ ಪತ್ರವನ್ನು ದೃಡಿಕರಿಸಿರುತ್ತಾರೆ, ಅಂತಾ ಸಾಕ್ಷ್ಯ ನುಡಿಯುತ್ತಾರೆ. ಅದಕ್ಕೆ ನೀವೇನು ಹೇಳುತ್ತೀರಿ ?

ಉಃ

ಪ್ರಶ್ನೆ 5) ಪ್ರಾಸಾ.13 ಕೆ. ಎಸ್.ಲತಾಕುಮಾರಿ ತಂದೆಃ ಸಿದ್ದಪ್ಪ ಇವರು ತಮ್ಮ ಸಾಕ್ಷ್ಯದಲ್ಲಿ ಹೇಳುತ್ತಾರೆ, ದಿಃ 16-03-2009 ರಿಂದ 2011 ರವರೆಗೆ ಸಹಾಯಕ ಆಯುಕ್ತರು ಸೇಡಂ ಅಂತಾ ಕರ್ತವ್ಯ

Scanned with OKEN Scanner

ನಿರ್ವಹಿಸಿರುತ್ತೇನೆ. ಅಪೀಲ್ ಸಂಖ್ಯೆ 139/2007-08 ಇದರಲ್ಲಿ ಪಾಸಾ-1 ರವರು ಮರತೂರ ಗ್ರಾಮದ ಚಿತ್ತಾಪೂರ ತಾಲೂಕಿನವರಿದ್ದು, ನಾಗಪ್ಪ ತಂದೆ ಗುರುಲಿಂಗಪ್ಪ ಮಾಳಿಗೆ, ಸಾ: ಮರತೂರ ಮತ್ತು ಗ್ರಾಮ ಲೆಕ್ಕಿಗರು ಮರತೂರ ಹಾಗೂ ಕಂದಾಯ ನಿರೀಕ್ಷಕರು ಶಹಾಬಾದ ಇವರ ವಿರುದ್ಧ ನಮ್ಮ ನ್ಯಾಯಾಲಯದಲ್ಲಿ ಒಂದು ಅಪೀಲು ಅರ್ಜಿಯನ್ನು ಸಲ್ಲಿಸಿದ್ದು ಇರುತ್ತದೆ. ಚಿತ್ತಾಪೂರ ತಾಲೂಕಿನ ಮರತೂರ ಗ್ರಾಮದ ಸರ್ವೇ ನಂ: 449 ರಲ್ಲಿ 5 ಎಕರೆ 37 ಗುಂಟೆ ಜಮೀನಿಗೆ ಸಂಬಂಧಿಸಿದಂತೆ ಕಂದಾಯ ನಿರೀಕ್ಷಕರು ಮಾಡಿದ ಮುಟೇಷನ್ ಸಂಖ್ಯೆ 39/2007-08, ದಿ: 01-09-2007 ಸದರಿ ಮುಟೇಷನ್ ವಿರುದ್ಧ ಮೇಲ್ಮನವಿಯನ್ನು ಸಲ್ಲಿಸಿದ್ದು ಇರುತ್ತದೆ. ಅಂತಾ ಸಾಕ್ಷ್ಯ ನುಡಿಯುತ್ತಾರೆ. ಅದಕ್ಕೆ ನೀವೇನು ಹೇಳುತ್ತೀರಿ ?

ಉ:

ಪ್ರಶ್ನೆ 6) ಪ್ರಾಸಾ.13 ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಹೇಳುತ್ತಾರೆ, ಪ್ರಕರಣದ ವಿಚಾರಣೆಯನ್ನು ಪೂರ್ಣಗೊಳಿಸಿ ಚಿತ್ತಾಪೂರ ತಾಲೂಕಿನ ಮರತೂರ ಗ್ರಾಮದ ಸರ್ವೇ ನಂ: 449 ರಲ್ಲಿ 5 ಎಕರೆ 37 ಗುಂಟೆ ಜಮೀನಿಗೆ ಸಂಬಂಧಿಸಿದ ಮುಟೇಷನ್ ಸಂಖ್ಯೆ 39/2007-08 ನೇದ್ದನ್ನು ದಿ: 01-07-2007 ನ್ನು ರದ್ದುಪಡಿಸಲಾಗಿದೆ ಅಂತಾ ದಿ: 17-07-2009 ರಂದು ಆದೇಶವನ್ನು ಮಾಡಿರುತ್ತೇನೆ. ನನ್ನ ಹಿಂದಿನ ಸಹಾಯಕ ಆಯುಕ್ತರರು ದಿ: 01-04-2008 ರಂದು ಮುಟೇಷನ್ ಸಂಖ್ಯೆ 39/2007-08 ನೇದ್ದರಿಗೆ ತಡೆಯಾಜ್ಞೆಯನ್ನು ಮಾಡಿದ್ದು ಇರುತ್ತದೆ. ಸಾಕ್ಷಿಗೆ ತಾವು ಮಾಡಿದ ಆದೇಶದ ಪ್ರತಿಯನ್ನು ತೋರಿಸಲಾಗಿ ಅದನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ-10 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ-10(ಎ) ಎಂದು ಗುರುತಿಸಲಾಯಿತು, ಸಾಕ್ಷಿಯು ತಮ್ಮ ಹಿಂದಿನ ಸಹಾಯಕ ಆಯುಕ್ತರರು ಮಾಡಿರುವ ಆದೇಶವನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ-11 ಎಂದು ಗುರುತಿಸಲಾಗಿದೆ. ಸಾಕ್ಷಿಯು ಎಂ. ಆರ್ ಸಂಖ್ಯೆ 39/2007-08 ನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ-8 ಎಂದು ಗುರುತಿಸಲಾಗಿದೆ ಅಂತಾ ಸಾಕ್ಷ್ಯ ನುಡಿಯುತ್ತಾರೆ. ಅದಕ್ಕೆ ನೀವೇನು ಹೇಳುತ್ತೀರಿ ?

ಉ:

ಪ್ರಶ್ನೆ 7) ಪ್ರಾಸಾ.14 ಸಿದ್ದಗೌಡ ತಂದೆ: ಹಣಮಂತರಾವ ಇವರು ತಮ್ಮ ಸಾಕ್ಷ್ಯದಲ್ಲಿ ಹೇಳುತ್ತಾರೆ, ಈ ಪ್ರಕರಣದಲ್ಲಿ ದಿ: 15-10-2009 ರಂದು ಮಾನ್ಯ ನ್ಯಾಯಾಲಯದ ಪಿ.ಸಿ. ನಂ: 09/2009 ಸ್ವೀಕರಿಸಿ ಅದನ್ನು ನಮ್ಮ ಠಾಣಾ ಗುನ್ನಾ ನಂ: 119/2009 ರಂತೆ ಕಲಂ 467, 468, 471,420, 504,506 ಸಹ

ಕಲಂ 34 ಐ. ಪಿ. ಸಿ ಅಡಿ ಪ್ರಕರಣ ದಾಖಲಿಸಿ ಪ್ರಥಮ ವರ್ತಮಾನವನ್ನು ತಯಾರಿಸಿ ಮಾನ್ಯ ನ್ಯಾಯಾಲಯ ಹಾಗೂ ಮೇಲಾಧಿಕಾರಿಗೆ ಕಳುಹಿಸಿಕೊಟ್ಟಿರುತ್ತೇನೆ, ದಿಃ 16-10-2009 ರಂದು ಮರತೂರ ಗ್ರಾಮದ ಸರ್ವೇ ನಂಃ 449 ಕ್ಕೆ ಸ್ಥಳಕ್ಕೆ ಭೇಟಿ ನೀಡಿ ಹಾಜರಿದ್ದ ಚಾಸಾ-1 ಹಾಗೂ ಪಂಚರಾದ ಚಾಸಾ-2 ಮತ್ತು 3 ರವರ ಸಮಕ್ಷಮ ಸ್ಥಳ ಪಂಚನಾಮೆಯನ್ನು ಬೆಳಗ್ಗೆ 10:00 ರಿಂದ 11:00 ಗಂಟೆಯವರೆಗೆ ತಯಾರಿಸಿರುತ್ತಾರೆ, ಅಂತಾ ಸಾಕ್ಷ್ಯ ನುಡಿಯುತ್ತಾರೆ. ಆದಕ್ಕೆ ನೀವೇನು ಹೇಳುತ್ತೀರಿ ?

ಉಃ ಶ್ರು ಸ್ಟ

ಪ್ರಶ್ನೆ 8) ಪ್ರಾಸಾ.14 ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಹೇಳುತ್ತಾರೆ, ದಿಃ 30-03-2010 ರಂದು ಆರೋಪಿ ನಂ 2 ಮತ್ತು 3 ರವರು ಮಾನ್ಯ ಜಿಲ್ಲಾ ಹಾಗೂ ಸತ್ರ ನ್ಯಾಯಾಲಯದಿಂದ ನಿರೀಕ್ಷಣಾ ಜಾಮೀನು ಪಡೆದುಕೊಂಡು ಬಂದಿದ್ದು ಅವರನ್ನು ದಸ್ತಗಿರಿ ನಿಯಾಮವಾಳಿ ಪಾಲಿಸಿ ಸೂಕ್ತ ಜಾಮೀನಿನ ಮೇಲೆ ಬಿಡುಗಡೆ ಮಾಡಿರುತ್ತೇನೆ. ದಿಃ 11-02-2010 ರಂದು ಆರೋಪಿತನಾದ ಶ್ರೀ ನಾಗಪ್ಪನನ್ನು ಆತನ ಮನೆಯಲ್ಲಿ ದಸ್ತಗಿರಿ ಮಾಡಿ ದಸ್ತಗಿರಿ ನಿಯಾಮವಳಿ ಪಾಲಿ ಸೂಕ್ತ ಬಂದೊಬಸ್ತನೊಂದಿಗೆ ಮಾನ್ಯ ನ್ಯಾಯಾಲಯದ ಮುಂದೆ ಹಾಜರುಪಡಿಸಿರುತ್ತೇವೆ. ಅದೇ ದಿನ ಚಾಸಾ-4 ರಿಂದ 7 ರವರ ಹೇಳಿಕೆಗಳನ್ನು ಪಡೆದುಕೊಂಡು ಕಡತಕ್ಕೆ ಅಳವಡಿಸಿರುತ್ತೇನೆ, ಅಂತಾ ಸಾಕ್ಷ್ಯ ನುಡಿಯುತ್ತಾರೆ. ಆದಕ್ಕೆ ನೀವೇನು ಹೇಳುತ್ತೀರಿ ?

ಉಃ ಶ್ರು ಸ್ಟ

ಪ್ರಶ್ನೆ 9) ಪ್ರಾಸಾ.14 ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಹೇಳುತ್ತಾರೆ, ದಿಃ 25-10-2010 ರಂದು ಚಾಸಾ-8 ಮತ್ತು 9 ಹಾಗೂ ದಿಃ 24-10-2010 ರಂದು ಚಾಸಾ-10 ರವರ ಹೇಳಿಕೆಗಳನ್ನು ಪಡೆದುಕೊಂಡು ಕಡತಕ್ಕೆ ಅಳವಡಿಸಿರುತ್ತೇನೆ. ದಿಃ 26-07-2010 ರಂದು ಮುಟೇಷನ್ ದಾಖಲೆ ಪತ್ರ, ಮುಟೇಷನ್ ಪ್ರತಿ ನಮೂನೆ-12, 4 ಪಹಣಿ ಪತ್ರಿಕೆಗಳನ್ನು ಸನ್ 2006 ರಿಂದ 2010 ರ ವರೆಗಿನ ಹಾಗೂ ಮೃತ ಗುರುಲಿಂಗಪ್ಪರವರ 2 ಮರಣ ಪ್ರಮಾಣ ಪತ್ರಗಳನ್ನು ದಿಃ 10-08-2010 ರಂದು ಕಾರಣ ಗುರುಲಿಂಗಪ್ಪರವರು ಜೀವಿತಾವಧಿಯಲ್ಲಿ ಅವರು ಮರಣ ಹೊಂದಿರುತ್ತಾರೆ ಅಂತಾ ಮರಣ ಪ್ರಮಾಣ ಪತ್ರವನ್ನು ಪಡೆದುಕೊಂಡು ಮುಟೇಷನ್ ಮಾಡಿಕೊಂಡಿದ್ದು ಕಂಡುಬಂದಿರುತ್ತದೆ. ಎ. ಸಿ. ಸೇಡಂರವರ ಆದೇಶದ ಪ್ರತಿ ಹಾಗೂ ವಂಶಾವಳಿ ಪ್ರತಿಯನ್ನು ಪಡೆದುಕೊಂಡು ಕಡತಕ್ಕೆ ಅಳವಡಿಸಿರುತ್ತೇನೆ, ದಿಃ 15-11-2010 ರಂದು ಪ್ರಕರಣದ ತನಿಖೆ

Scanned with OKEN Scanner

ಪೂರ್ಣಗೊಂಡಿದ್ದು ಆರೋಪಿತರ ವಿರುದ್ಧ ಸಾಕಷ್ಟು ಸಾಕ್ಷ್ಯಾಧಾರಗಳು ಕಂಡುಬಂದಿದ್ದರಿಂದ ಮಾನ್ಯ ನ್ಯಾಯಾಲಯಕ್ಕೆ ದೋಷಾರೋಪಣೆ ಪಟ್ಟಿಯನ್ನು ಸಲ್ಲಿಸಿರುತ್ತಾರೆ, ಅಂತಾ ಸಾಕ್ಷ್ಯ ನುಡಿಯುತ್ತಾರೆ. ಅದಕ್ಕೆ ನೀವೇನು ಹೇಳುತ್ತೀರಿ ?

ಉಃ

ಪ್ರಶ್ನೆ 10) ಪ್ರಾಸಾ.15 ಶಶಿಕಾಂತ ತಂದೆಃ ನಿವೃತ್ತಿರಾವ ಶಿಂಧೆ ಇವರು ತಮ್ಮ ಸಾಕ್ಷ್ಯದಲ್ಲಿ ಹೇಳುತ್ತಾರೆ, ನಾನು 2005 ನೇ ಸಾಲಿನಿಂದ ಇಲ್ಲಿಯವರೆಗೆ ಶಹಾಬಾದ ನ್ಯಾಯಾಲಯದಲ್ಲಿ ವಕೀಲಿ ವೃತ್ತಿಯನ್ನು ಮಾಡುತ್ತಿದ್ದೇನೆ. ಸಾಕ್ಷಿಗೆ ಕ್ರಿಮಿನಲ್ ಮಿಸ್. ನಂಃ 4/2008 ರ ಆದೇಶದ ಪುಟಗಳು, ಅರ್ಜಿ, ಮುಖ್ಯ ವಿಚಾರಣೆ ಪ್ರಮಾಣ ಪತ್ರ, ಸದರಿ ಕ್ರಿಮಿನಲ್ ಮಿಸ್ ಹಾಜರುಪಡಿಸಿದ ಅಲಭ್ಯ ಪ್ರಮಾಣ ಪತ್ರವನ್ನು ಹಾಗೂ ಆದೇಶದ ಪ್ರತಿಗಳ ದೃಡಿಕೃತ ನಕಲು ಪ್ರತಿಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ಕ್ರಮವಾಗಿ ನಿಪಿ-23 ರಿಂದ 27 ಎಂದು ಗುರುತಿಸಲಾಯಿತು, ನಿಪಿ-24 ನಲ್ಲಿ ಇರುವ ಸಹಿಯನ್ನು ಸಾಕ್ಷಿಯು ನೋಡಿ ಗುರುತಿಸಿದ್ದು, ಅದನ್ನು ನಿಪಿ-24(ಎ) ಎಂದು, ನಿಪಿ-25 ರಲ್ಲಿ ಇರುವ ಸಹಿಯನ್ನು ಸಾಕ್ಷಿಯು ನೋಡಿ ಗುರುತಿಸಿದ್ದು, ಅದನ್ನು ನಿಪಿ-25(ಎ) ಎಂದು ಗುರುತಿಸಲಾಯಿತು, ಅಂತಾ ಸಾಕ್ಷ್ಯ ನುಡಿಯುತ್ತಾರೆ. ಅದಕ್ಕೆ ನೀವೇನು ಹೇಳುತ್ತೀರಿ ?

ಉಃ

ಪ್ರಶ್ನೆ 11) ಪ್ರಾಸಾ.15 ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಹೇಳುತ್ತಾರೆ, ಸದರಿ ಅರ್ಜಿಯನ್ನು ದಿವಂಗತ ಶ್ರೀ ಎಂ. ಆರ್. ದೊಡ್ಡಮನಿಯವರು ಅರ್ಜಿಯನ್ನು ತಯಾರಿಸುವಂತೆ ಹೇಳಿದ್ದರಿಂದ ಸದರಿ ಅರ್ಜಿಯನ್ನು ತಯಾರಿಸಿ ಮಾನ್ಯ ನ್ಯಾಯಾಲಯದ ಮುಂದೆ ಹಾಜರುಪಡಿಸಿರುತ್ತೇನೆ. ನಿಪಿ-25 ನ್ನು ತಯಾರಿಸಲು ಎಂ. ಆರ್. ದೊಡ್ಡಮನಿ ವಕೀಲರು ಹಾಗೂ ಅವರ ಪಕ್ಷಗಾರರು ಹಾಜರು ಇದ್ದು, ಅವರ ಮಾಹಿತಿ ಮೇರೆಗೆ ನಿಪಿ-25 ನ್ನು ತಯಾರಿಸಿರುತ್ತೇನೆ. ನಿಪಿ-26 ನ್ನು ಎಂ. ಆರ್. ದೊಡ್ಡಮನಿ ವಕೀಲರು ಹಾಗೂ ಅವರ ಪಕ್ಷಗಾರರು ನನಗೆ ಕೊಟ್ಟಿರುತ್ತಾರೆ, ಅಂತಾ ಸಾಕ್ಷ್ಯ ನುಡಿಯುತ್ತಾರೆ. ಅದಕ್ಕೆ ನೀವೇನು ಹೇಳುತ್ತೀರಿ ?

ಉಃ

ಪ್ರಶ್ನೆ 12) ಪ್ರಾಸಾ.15 ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಹೇಳುತ್ತಾರೆ, ನನಗೆ ಆರೋಪಿ ನಂಃ 3 ರವರ ಪರಿಚಯ ಇರುತ್ತದೆ. ನನಗೆ ಶಿವಶಂಕ್ರಪ್ಪ ತಂದೆ ಗುರುಲಿಂಗಪ್ಪ ಮಸಕದ್ ರವರ ಪರಿಚಯ ಇರುವುದಿಲ್ಲ. ನಿಪಿ-24 ನ್ನು ಗುರುಲಿಂಗಪ್ಪ ತಂದೆ ನಾಗಪ್ಪರವರು ದಿಃ 08-09-2006 ರಂದು

Scanned with OKEN Scanner

ತೀರಿಕೊಂಡಿರುತಾರೆ ಅಂತಾ ಅರ್ಜಿಯನ್ನು ಸಲ್ಲಿಸಿರುತ್ತೇನೆ. ಸದರಿ ಅರ್ಜಿಯನ್ನು ಎಂ. ಆರ್. ದೊಡ್ಡಮನಿ ವಕೀಲರು ಹೇಳಿದಂತೆ ತಯಾರಿಸಿರುತ್ತೇನೆ ಹಾಗೂ ಅವರು ಪೂರೈಸಿದ ದಾಖಲೆ ನಿಪಿ-26 ರ ಮೇರೆಗೆ ತಯಾರಿಸಿರುತ್ತಾರೆ, ಅಂತಾ ಸಾಕ್ಷ್ಯ ನುಡಿಯುತ್ತಾರೆ. ಅದಕ್ಕೆ ನೀವೇನು ಹೇಳುತ್ತೀರಿ ?

ಉಃ [illegible]

ಪ್ರಶ್ನೆ 13) ನೀವು ಇನ್ನೇನಾದರು ಹೇಳುವುದು ಇದೆಯೇ ?

ಉಃ ಇಲ್ಲ

ಪ್ರಶ್ನೆ 14) ನಿಮ್ಮ ಪರವಾಗಿ ಯಾವುದಾದರೂ ಸಾಕ್ಷಿಗಳನ್ನು ಮಾಡಿಸುತ್ತೀಯಾ?

ಉಃ ಸಾಕ್ಷಿಗಳನ್ನು ಮಾಡಿಸುತ್ತೇನೆ

(ಆರೋಪಿಗಳಿಗೆ ನನ್ನ ಸಮಕ್ಷಮ ಅವರಿಗೆ ಗೊತ್ತಿದ್ದ ಭಾಷೆಯಲ್ಲಿ ಅಭಿಯೋಜಕರ ಪರ ವಿಚಾರಣೆಯಾದ ಸಾಕ್ಷಿಗಳ ಹೇಳಿಕೆಗಳನ್ನು ಓದಿ ಹೇಳಲಾಯಿತು).

9/11/22

ಪ್ರ.ದ. ನ್ಯಾ.ದಂ. ಶಹಾಬಾದ

ದಿನಾಂಕ 7.11.2022

9/11/22

Scanned with OKEN Scanner